# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಉಮಾಶ್ರೀ ಇವರ ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

## ಪ್ರಶ್ನೆ

ಕರ್ನಾಟಕದಲ್ಲಿನ ಕಲಾ ಜಗತ್ತಿನಲ್ಲಿ ಕಲಾ ಪ್ರಕಾರಗಳು ಅನೇಕ ರೀತಿಯಲ್ಲಿ ಇರುತ್ತವೆ. ನಾಟಕ, ಸಿನಿಮಾ, ಕಿರುತೆರೆಗಳಲ್ಲಿ ಕಲಾವಿದರು, ತಂತ್ರಜ್ಞರು ಸಾವಿರಾರು ಜನರು ಭಾಗಿಯಾಗಿ ಕಲಾ ಕ್ಷೇತ್ರಕ್ಕೆ ಕೊಡುಗೆ ನೀಡಿರುತ್ತಾರೆ. ಅಂತಹ ಕಲಾವಿದರಲ್ಲಿ ಕಿರುತೆರೆ ತಂತ್ರಜ್ಞರು, ಕಲಾವಿದರು ಸೇರಿ ಕರ್ನಾಟಕ ಟೆಲಿವಿಜನ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು ನಿರ್ಮಾಣ ಮಾಡಿಕೊಂಡು ಸುಮಾರು 25 ವರ್ಷಗಳಿಂದಲೂ ಈ ಸಂಸ್ಥೆ ಕಾರ್ಯ ನಿರ್ವಹಣೆ ನಡೆಸಿರುತ್ತದೆ. ಬಿ.ಡಿ.ಎ ವತಿಯಿಂದ 39 ಗುಂಟೆ ಜಾಗವನ್ನು ಉತ್ತರಹಳ್ಳಿ ಹೋಬಳಿಯ ಭಾರತಿ ಹೌಸಿಂಗ್ ಕೋ ಆಪರೇಟಿವ್ ಲೇಔಟ್‌ನಲ್ಲಿ ಸದರಿ ಸಂಸ್ಥೆಯ ಅಂಗಸಂಸ್ಥೆಯಾದ ಟಿ.ಸಿ ಅಂಡ್ ಸ್ಪೋರ್ಟ್ಸ್ ಕ್ಲಬ್‌ಗೆ ಕ್ರೀಡೆ ಮತ್ತು ಮನೋರಂಜನೆ ಚಟುವಟಿಕೆಗಳಿಗಾಗಿ ಸರ್ಕಾರ ನೀಡಿರುತ್ತದೆ. ಅಲ್ಲದೆ ಕಟ್ಟಡ ನಿರ್ಮಾಣಕ್ಕಾಗಿ ಮೂರು ಕೋಟಿ ಅನುದಾನವನ್ನು ನೀಡಿರುತ್ತದೆ. ಕಟ್ಟಡ ಕಟ್ಟಿದ ಕಾಲದಿಂದ ಇಲ್ಲಿಯವರೆಗೆ ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ಸ್‌ನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ವ್ಯಕ್ತಿ ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಕಲಾವಿದರನ್ನು ಬೈಲಾ ಪ್ರಕಾರ ಸದಸ್ಯತ್ವವನ್ನು ನೀಡದೆ ಕಲಾವಿದರೇತರರನ್ನು ಸದಸ್ಯರನ್ನಾಗಿಸಿಕೊಂಡು ಮನಸೋ ಇಚ್ಛೆ ಸದಸ್ಯತ್ವ ಶುಲ್ಕ ಪಡೆದುಕೊಂಡಿರುತ್ತಾರೆ. ಕಲಾವಿದರಿಗೆ ಇದರಿಂದ ಯಾವುದೇ ರೀತಿಯ ಪ್ರಯೋಜನವಾಗದೆ ಹೋಗಿದೆ. ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ವ್ಯಕ್ತಿ ಈಗ ಆ ಆಸ್ತಿಯನ್ನು ಸ್ವಂತ ಆಸ್ತಿಯಂತೆ ಮಾಡಿಕೊಂಡು ಅನೇಕ ರೀತಿಯ ಅವ್ಯವಹಾರ ನಡೆಸಿರುತ್ತಾರೆ. ಜಿ.ಎಸ್.ಟಿ ಶುಲ್ಕ ಕಟ್ಟದೆ ಸರ್ಕಾರದ ಬೊಕ್ಕಸಕ್ಕೆ ದ್ರೋಹವೆಸಗಿದ್ದಾರೆ. ಅಲ್ಲಿನ ಸಿಬ್ಬಂದಿಗೆ ಇ.ಎಸ್.ಐ ಮತ್ತು ಪಿ.ಎಫ್. ಗಳಂತಹ ಯಾವುದೇ ಹಣವನ್ನು ಕಟ್ಟಿರುವುದಿಲ್ಲ. ಬಿ.ಬಿ.ಎಂ.ಪಿ ಗೆ ಕಟ್ಟಡ ಶುಲ್ಕವನ್ನು ಕೂಡ ಕಟ್ಟಿರುವುದಿಲ್ಲ. ಯಾವುದೇ ರೀತಿಯ ತೀರ್ಮಾನಗಳನ್ನು ಏಕಮುಖವಾಗಿ ತೆಗೆದುಕೊಂಡು ಟೆಲಿವಿಷನ್ ಕಲಾವಿದರ ಸಂಸ್ಥೆಗೆ ಮೋಸವೆಸಗಿರುತ್ತಾರೆ. ಸರ್ವಾಧಿಕಾರಿಯಾಗಿ ಇಡೀ ಸ್ವತ್ತನ್ನು ಕಬಳಿಸುವ ಹುನ್ನಾರ ಇದರ ಹಿಂದೆ ಇರುವುದು ಸ್ಪಷ್ಟವಾಗುತ್ತದೆ. ಕಲಾವಿದರ ಒಳಿತಿಗಾಗಿ ಸರ್ಕಾರ ನೀಡಿದ ಸಹಾಯ ಕಲಾವಿದರ ಕೈಬಿಟ್ಟು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಗಂಭೀರ ವಿಚಾರವನ್ನು ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಲು ಇಚ್ಛಿಸುತ್ತೇನೆ.

## ಉತ್ತರ

ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ನಂ.17, ಉತ್ತರಹಳ್ಳಿ, ಬೆಂಗಳೂರು-560061 ಈ ಸಂಸ್ಥೆಯು ನೋಂದಣಿ ಸಂಖ್ಯೆ: 283/99-2000 ರಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿಯಾಗಿರುತ್ತದೆ. ಹಾಗೂ ಈ ಕ್ಲಬ್‌ಗೆ ಬಿ.ಡಿ.ಎ ಯಿಂದ ದಿನಾಂಕ: 09-07-2010 ರಲ್ಲಿ 3767.40 ಚ.ಮೀ ಭೂಮಿಯನ್ನು ರೂ.94,18,500/- ಮೊತ್ತಕ್ಕೆ 30 ವರ್ಷಗಳ ಅವಧಿಯವರೆಗೆ ಗುತ್ತಿಗೆಗೆ ನೀಡಲಾಗಿರುತ್ತದೆ. **(ಅನುಬಂಧ-1).**

ಕ್ಲಬ್‌ಗೆ 2011-12 ನೇ ಸಾಲಿನಲ್ಲಿ ವಾರ್ತಾ ಇಲಾಖೆಯ ಮೂಲಕ ಒಟ್ಟು ರೂ.3,00,00,000/- ಕಟ್ಟಡ ನಿರ್ಮಾಣದ ಉದ್ದೇಶಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ಲಬ್‌ನ 2022-23 ರ ಅಂತ್ಯಕ್ಕೆ ಲೆಕ್ಕಪರಿಶೋಧನಾ ವರದಿಯಂತೆ ಜಿ.ಎಸ್.ಟಿ ರೂ.59,56,181/-, ಇ.ಸಿ.ಐ ರೂ.55,814/-

ಹಾಗೂ ಪಿ.ಎಫ್. ರೂ.2,88,211/- ಪಾವತಿಸಲು ಬಾಕಿಯಿರುತ್ತದೆ. ಬಿ.ಬಿ.ಎಂ.ಪಿ. ಯವರು ದಿನಾಂಕ: 03-02-2024 ರಂದು ನೋಟೀಸು ನೀಡಿದ್ದು, ಸದರಿ ನೋಟೀಸಿನಂತೆ ಆಸ್ತಿ ತೆರಿಗೆ ರೂ.13,76,031/- ಪಾವತಿಸಲು ಬಾಕಿಯಿರುತ್ತದೆ.

ಈ ಕ್ಲಬ್‌ನ ಸದಸ್ಯರು ವಿವಿಧ ದಿನಾಂಕಗಳಲ್ಲಿ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಇವರ ವಿರುದ್ಧ ದೂರು ಅರ್ಜಿ ಸಲ್ಲಿಸಿರುತ್ತಾರೆ. ಸದಸ್ಯರುಗಳಿಂದ ಸ್ವೀಕೃತವಾದ ದೂರು ಅರ್ಜಿ ವಿಚಾರಣೆ ನಡೆಸಿ ಪ್ರಾಥಮಿಕ ವರದಿ ಸಲ್ಲಿಸುವಂತೆ ಸಹಕಾರ ಅಭಿವೃದ್ಧಿ ಅಧಿಕಾರಿ, ಆನೇಕಲ್ ತಾಲ್ಲೂಕು ಇವರಿಗೆ ಸೂಚಿಸಲಾಗಿರುತ್ತದೆ. **(ಅನುಬಂಧ-2)** ಹಾಗೂ ಸದರಿಯವರು ದೂರು ಅರ್ಜಿಯಲ್ಲಿ ಆರೋಪಿಸಿರುವ ಪ್ರಮುಖ ಅಂಶಗಳ ಬಗ್ಗೆ ಸಂಘಕ್ಕೆ ಭೇಟಿ ನೀಡಿ, ದಿನಾಂಕ: 29-01-2024 ರಂದು ಪ್ರಾಥಮಿಕ ವರದಿಯನ್ನು ಸಲ್ಲಿಸಿ ದೂರು ಅರ್ಜಿಯಲ್ಲಿನ ಅಂಶಗಳು ಮೇಲ್ನೋಟಕ್ಕೆ ಸಾಬೀತುಗೊಂಡಿರುವುದು ಕಂಡು ಬಂದಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ಕಲಂ 25 ರಡಿ ಶಾಸನಬದ್ಧ ವಿಚಾರಣೆಗೆ ಒಳಪಡಿಸುವುದು ಸೂಕ್ತವೆಂದು ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಕ್ಲಬ್‌ನ ಕಾರ್ಯಕಾರಿ ಸಮಿತಿಯ ಅವಧಿಯು ದಿನಾಂಕ: 01-12-2023 ಕ್ಕೆ ಮುಗಿದಿರುವುದರಿಂದ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ1960 ರ ಕಲಂ 27(2) ರಂತೆ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಪ್ರಾಥಮಿಕ ವರದಿಯನ್ನು ಸಲ್ಲಿಸಿರುತ್ತಾರೆ.**(ಅನುಬಂಧ-3)**

ಸಹಕಾರ ಅಭಿವೃದ್ಧಿ ಅಧಿಕಾರಿಯವರು ಸಲ್ಲಿಸಿರುವ ಪ್ರಾಥಮಿಕ ವರದಿಯನ್ನು ಪರಿಶೀಲಿಸಿ ದೂರು ಅರ್ಜಿಯಲ್ಲಿನ ಅಂಶಗಳು ಮೇಲ್ನೋಟಕ್ಕೆ ಸಾಬೀತುಗೊಂಡಿದ್ದು ಶಾಸನಬದ್ಧ ವಿಚಾರಣೆಯನ್ನು ನಡೆಸುವ ಅವಶ್ಯಕತೆ ಇರುವುದು ಕಂಡುಬಂದಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿ ಒಂಭತ್ತು (9) ವಿಚಾರಣಾಂಶಗಳನ್ನು ನಿಗಧಿಪಡಿಸಿ 60 ದಿನಗಳೊಳಗೆ ವರದಿ ನೀಡುವಂತೆ ಸಹಕಾರ ಅಭಿವೃದ್ಧಿ ಅಧಿಕಾರಿ, ಆನೇಕಲ್ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಸ್ವಯಂ ಆದೇಶಿಸಲಾಗಿರುತ್ತದೆ.**(ಅನುಬಂಧ-4)**

ಸಂಘಗಳ ನೋಂದಣಿ ಅಧಿನಿಯಮ ಕಲಂ 25 ರಡಿ ನಿಗಧಿಪಡಿಸಿರುವ ಒಂಭತ್ತು (9) ವಿಚಾರಣಾಂಶಗಳು ಈ ಕೆಳಕಂಡಂತಿವೆ

1. ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್‌ಗೆ ಸರ್ಕಾರದಿಂದ ಜಾಗ ಮಂಜೂರಾಗಿರುತ್ತದೆ. ಕಟ್ಟಡ ಕಟ್ಟಲು ಸುಮಾರು ರೂ.3.00 ಕೋಟಿಗಳ ಅನುದಾನ ಬಿಡುಗಡೆ ಆಗಿರುವುದರಿಂದ, ಕಾರ್ಯಕಾರಿ ಸಮಿತಿಯು ಪಾರದರ್ಶಕ ಕಾಯ್ದೆ ರೀತ್ಯಾ ಟೆಂಡರ್ ಕರೆದು ಕಟ್ಟಡ ನಿರ್ಮಾಣ ಮಾಡಿರುವುದಿಲ್ಲವೆಂದು ಆರೋಪಿಸಿರುವ ಬಗ್ಗೆ.
2. ಕ್ಲಬ್‌ನ ಆವರಣದಲ್ಲಿ ಶೇಕಡ 50 ರಷ್ಟು ಭಾಗವನ್ನು ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಗೆ ಕಛೇರಿ ತೆರೆಯಲು ಅವಕಾಶ ನೀಡದೇ ಇರುವುದು.
3. ದಿನಾಂಕ: 03-12-2018 ರ ಚುನಾವಣೆಯಲ್ಲಿ ಸದಸ್ಯರಿಗೆ ಸ್ಪರ್ಧಿಸಲು ಅವಕಾಶ ಕೊಡದೆ, ಚುನಾವಣೆಗೆ ಆಯ್ಕೆ ಆಗಬೇಕಿರುವ ಸಂಖ್ಯೆಗಿಂತ ಕಡಿಮೆ ಅಭ್ಯರ್ಥಿಗಳು ಕಣದಲ್ಲಿ ಇರುವಂತೆ ಸಂದರ್ಭ ಸೃಷ್ಟಿಸಿಕೊಂಡ ರವಿಕಿರಣ್ ರವರು 10 ಜನರ ಅವರದೇ ತಂಡ ಅವಿರೋಧ ಆಯ್ಕೆಯಾಗಿರುವುದಾಗಿ ಆರೋಪಿಸಿರುತ್ತಾರೆ.
4. ಕ್ಲಬ್‌ನ ಸದಸ್ಯತ್ವವನ್ನು ಸಂಸ್ಥೆಯ ಬೈಲಾ ಉಲ್ಲಂಘಿಸಿ ನೀಡಿದ್ದು, ಸದಸ್ಯತ್ವವನ್ನು ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಒಬ್ಬರೆ ನಿರ್ಧರಿಸಿ ಸದಸ್ಯತ್ವ ನೀಡುವಾಗ ಒಬ್ಬೊಬ್ಬ

ಸದಸ್ಯರಿಗೆ ಒಂದೊಂದು ಮೊತ್ತ ಪಾವತಿಸಿಕೊಂಡು ಸದಸ್ಯತ್ವ ನೀಡಿರುವುದಾಗಿ ಆರೋಪಿಸಿರುವ ಬಗ್ಗೆ.

5. ಸಂಸ್ಥೆಯು ತನ್ನ ವ್ಯವಹಾರಗಳಲ್ಲಿ ಸದಸ್ಯರುಗಳಿಂದ ಪಡೆದಿರುವ ಶುಲ್ಕದ ಜಿಎಸ್‌ಟಿಯನ್ನು ಸರ್ಕಾರಕ್ಕೆ ಪಾವತಿಸಿರುವುದಿಲ್ಲ. ಸದಸ್ಯರುಗಳ ಕಾರ್ಡ್‌ಗಳನ್ನು ಸದಸ್ಯರುಗಳ ಗಮನಕ್ಕೆ ತರದೇ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿರುವ ಬಗ್ಗೆ.
6. ಸರ್ಕಾರದಿಂದ ಅನುದಾನ ಪಡೆದಿರುವ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ಆರೋಪಿಸಿರುವ ಬಗ್ಗೆ.
7. ಕ್ಲಬ್‌ನ ಕಾರ್ಡ್ ವಿಭಾಗದಲ್ಲಿ ಶ್ರೀನಿವಾಸ್ ಎಂಬುವವರು ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಶ್ರೀ ವಿಜಯಕುಮಾರ್ ಇವರಿಗೆ ಸುಮಾರು ರೂ.2,80,000/-ವರೆಗೆ ಬಾಕಿ ಉಳಿಸಿಕೊಂಡು ಈವರೆವಿಗೂ ಹಿಂದಿರುಗಿಸಿಲ್ಲವೆಂದು ಆರೋಪಿಸಿರುವ ಬಗ್ಗೆ.
8. ಕ್ಲಬ್‌ನ ಕಟ್ಟಡ ಕಾಮಗಾರಿ ಅವಧಿ 2009 ರಿಂದ 2014 ರಲ್ಲಿ ಅಂದಿನ ಅಧ್ಯಕ್ಷರು ಹಾಗೂ ಅಂದಿನ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಇವರುಗಳು ಖಜಾಂಚಿ ಇಲ್ಲದೇ ಚೆಕ್ ವ್ಯವಹಾರ ನಡೆಸಿ ಹಣದುರುಪಯೋಗ ಮಾಡಲಾಗಿದೆ ಎಂದು ಆರೋಪಿಸಿರುವ ಬಗ್ಗೆ.
9. ವಿಚಾರಣಾ ಸಮಯದಲ್ಲಿ ಕಂಡು ಬರುವ ಇತರೆ ನ್ಯೂನತೆಗಳು

ಕ್ಲಬ್‌ನ ಕಾರ್ಯಕಾರಿ ಸಮಿತಿಯ ಚುನಾವಣೆಯು ದಿನಾಂಕ: 01-12-2018 ರಂದು ಐದು ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದು, ಸದರಿ ಸಮಿತಿಯ ಅವಧಿಯು 01-12-2023 ಕ್ಕೆ ಪೂರ್ಣಗೊಂಡಿರುತ್ತದೆ. ತದನಂತರ ಕ್ಲಬ್‌ನ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಸದೇ ಇರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಕಲಂ 27(2) ರಡಿಯಲ್ಲಿ ಆಡಳಿತಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿ ಜಿಲ್ಲಾ ನೋಂದಣಾಧಿಕಾರಿಗಳು ಪ್ರಸ್ತಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವೆಯಂತೆ, ಕ್ಲಬ್‌ಗೆ ಆಡಳಿತಾಧಿಕಾರಿಯನ್ನು ನೇಮಿಸಲು ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. **(ಅನುಬಂಧ-5).** ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಪರಿಶೀಲಿಸಿ ನಿಯಮಾನುಸಾರ ಸರ್ಕಾರದ ಹಂತದಲ್ಲಿ ಸೂಕ್ತ ಕ್ರಮವಹಿಸಲಾಗುವುದು.

ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್‌ನ ದೂರು ಅರ್ಜಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಕಲಂ 25ರಡಿಯಲ್ಲಿ ಪ್ರಗತಿಯಲ್ಲಿರುವ ವಿಚಾರಣೆಯು ಪೂರ್ಣಗೊಂಡು, ವರದಿ ಸ್ವೀಕೃತವಾದ ನಂತರ ಸದರಿ ವರದಿಗನುಗುಣವಾಗಿ ಮುಂದಿನ ಕ್ರಮವಿಡಲಾಗುವುದು.

**ಸಿಒ 20 ಸಿ.ಎಸ್.ಆರ್ 2024 (ಇ)**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ-1

ಈ ದಸ್ತಾವೇಜು ಹಾಳೆಯನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಕಂಇ 152 ಮುನೋಮು 2003 ದಿನಾಂಕ 09-05-2003ರ ಪ್ರಕಾರ ಮುದ್ರಿಸಲಾಗಿದೆ.

ಕರ್ನಾಟಕ ಸರ್ಕಾರ
Government of Karnataka

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

ದಸ್ತಾವೇಜು ಹಾಳೆ / Document Sheet

851 ನೇ ದಸ್ತಾವೇಜಿನ 1/9 ನೇ ಪುಟ
This sheet can be used for any document

2010-11

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

ಪಾವತಿಸಿದ ಒಟ್ಟು ಮುದ್ರಾಂಕ ಶುಲ್ಕ ರೂ.
Total stamp duty paid Rs.

ಉ.ಪ.ನೋ.ಬಿ.ಡಿ.ಎ

851
2010-11
I

# C.A. SITE LEASE AGREEMENT

1. That this Agreement of Lease entered into this ........9th........ Day of ........July........ **Two Thousand Ten between M/S. TELEVISION CULTURAL & SPORTS CLUB (R), No. 107/58/1, 3rd Cross, M.V. Seetharamaiah Road, Gavipuram Extension, Bangalore - 560 019, represented by its Secretary SRI. RAVIKIRAN, S/o Late. K.V. Prasad, aged about 52 years,** hereinafter called the LESSEE on the ONE PART and the Bangalore Development Authority, Bangalore, represented by its Deputy Secretary, hereinafter called the LESSOR on the other part. The terms, "LESSEE" and "LESSOR", mentioned above in this agreement shall mean and include the successors in Office or representatives or assigns, WITNESSETH as follows :

2. That the LESSEE applied for the Lease of Civic Amenity Site to the LESSOR for the benefit and use of the said site for the construction of **SOCIAL & CULTURAL CENTRE** for the specific purpose mentioned hereunder the LESSOR having agreed to for Lease of the schedule land to the LESSEE **Vide Sub No. 111/10, Dated 26.03.2010** subject to the terms and conditions mentioned hereafter. That the lease property which is more fully described in the schedule to this agreement has been leased for a period of THIRTY (30) YEARS commencing from the date of Registration of C.A Site Lease Agreement.

...2/-

For Television Cultural & Sports C...
Secretary

ಉಪಕಾರ್ಯದರ್ಶಿ-1
ಸಿ.ಎ. ನಿವೇಶನ ವಿಭಾಗ
ಬೆಂ.ಅ.ಪ್ರಾ. ಬೆಂಗಳೂರು

4/9

ದಸ್ತಾವೇಜು ಸಂಖ್ಯೆ : 851

Additional District Registrar ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಕಚೇರಿಯಲ್ಲಿ ದಿನಾಂಕ 09-07-2010 ರಂದು 03:11.40 PM ಗಂಟೆಗೆ ಈ ಕೆಳಗೆ ವಿವರಿಸಿದ ಶುಲ್ಕದೊಂದಿಗೆ

| ಕ್ರಮ ಸಂಖ್ಯೆ | ವಿವರ | ರೂ. ಪೈ |
|---|---|---|
| 1 | ನೋಂದಣಿ ಶುಲ್ಕ | 47360.00 |
| 2 | ಸೇವಾ ಶುಲ್ಕ | 270.00 |
| 3 | ಜಾಪನಾ ಪತ್ರದ ನಕಲು | 50.00 |
| | ಒಟ್ಟು : | 47680.00 |

ಶ್ರೀ M/S. TELEVISION CULTURAL & SPORTS CLUB (R), represented by its Secretary SRI. RAVIKIRAN S/o Late. K.V. Prasad. ಇವರಿಂದ ಹಾಜರ ಮಾಡಲ್ಪಟ್ಟಿದೆ

| ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|
| ಶ್ರೀ M/S. TELEVISION CULTURAL & SPORTS CLUB (R), represented by its Secretary SRI. RAVIKIRAN S/o Late. K.V. Prasad. |  |  | For Television Cultural & Sports C Secretary |

Additional District Registrar
ಅಧಿಕ ಜಿಲ್ಲಾ ನೋಂದಣಾಧಿಕಾರಿ
ಬೆಂಗಳೂರು ನಗರ ಜಿಲ್ಲೆ

ಬರೆದುಕೊಟ್ಟಿದ್ದಾಗಿ ಒಪ್ಪಿರುತ್ತಾರೆ

| ಕ್ರಮ ಸಂಖ್ಯೆ | ಹೆಸರು | ಫೋಟೋ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|---|
| 1 | M/S. TELEVISION CULTURAL & SPORTS CLUB (R), represented by its Secretary SRI. RAVIKIRAN S/o Late. K.V. Prasad . (ಬರೆಸಿಕೊಂಡವರು) |  |  | For Television Cultural & Sports Clu Secretary |
| 2 | BDA Deputy Secretary-1 Represented by Siddaramegowda (Agent) . (ಬರೆದುಕೊಡುವವರು) |  |  | |

ಅಧಿಕ ಜಿಲ್ಲಾ ನೋಂದಣಾಧಿಕಾರಿ
ಬೆಂಗಳೂರು ನಗರ ಜಿಲ್ಲೆ

ಈ ದಸ್ತಾವೇಜು ಹಾಳೆಯನ್ನು ಕರ್ನಾಟಕ ಸರ್ಕಾರದ
ಆದೇಶ ಸಂಖ್ಯೆ ಕಂ೯ 152 ಮುನೋಮು 2003
ದಿನಾಂಕ 09-05-2003ರ ಪ್ರಕಾರ ಮುದ್ರಿಸಲಾಗಿದೆ.

ಕರ್ನಾಟಕ ಸರ್ಕಾರ
Government of Karnataka

ದಸ್ತಾವೇಜು ಹಾಳೆ
Document Sheet

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This sheet can be used for any document

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

1 ನೇ ಪುಸ್ತಕದ ____ ನೇ ಪುಟ
Total stamp duty paid Rs.



3. That the LESSOR has given an opportunity to the LESSEE either to pay the 30 YEARS Lease Amount in One Lumpsum or Annual Installments. The LESSEE has opted to pay the Lease Amount in one lumpsum. Accordingly, the LESSEE has paid the lumpsum lease amount of **Rs. 94,18,500/- (Rupees Ninety Four Lakhs Eighteen Thousand Five hundred only).**

3A. That the LESSEE **has paid sum of Rs. 11,302/- (Rupees Eleven Thousand Three Hundred and Two only) as additional lease amount in One Lumpsum.**

4. That the lease period of THIRTY YEARS prescribed in this agreement in the first instance may be renewed after completion of 30 years Lease Period subject to the renewal for a period to be determined by the LESSOR by a separate deed. If the LESSEE does not agree for the renewed lease amount, the LESSEE agrees to surrender the site to the LESSOR free from all encumbrances.

For Television Cultural & Sports C.

Secretary

...3/-

Additional District Registrar

ರಜಿಸ್ಟ್ರೇಷನ್ ಕಾಯ್ದೆ ಕಲಂ 88(i) ಪ್ರಕಾರ ಹಾಜರಾಗಲು ವಿನಾಯ್ತಿಯಿರುವ BDA Represented by Deputy Secretary-1 . ಇವರು ದಸ್ತಾವೇಜನ್ನು ಬರೆದುಕೊಟ್ಟಿರುವಿದನ್ನು,ನಾನು ಒಪ್ಪಿರುತ್ತೇನೆ.

ಅಧಿಕ ಜಿಲ್ಲಾ ನೋಂದಣಾಧಿಕಾರಿ
Additional District Registrar
ಬೆಂಗಳೂರು ನಗರ ಜಿಲ್ಲೆ

1 ನೇ ಪುಸ್ತಕದ 851 ನೇ ದಸ್ತಾವೇಜಿನ 41/9 ನೇ ಪುಟ
2010-11

ಅ.ಜಿ.ನೋ.ಬಿ.ಡಿ.ಎ

ಈ ದಸ್ತಾವೇಜು ಹಾಳೆಯನ್ನು ಕರ್ನಾಟಕ ಸರ್ಕಾರದ
ಆದೇಶ ಸಂಖ್ಯೆ ಕಂಇ 152 ಮುನೋಮು 2003
ದಿನಾಂಕ 09 05 2003ರ ಪ್ರಕಾರ ಮುದ್ರಿಸಲಾಗಿದೆ.

ಕರ್ನಾಟಕ ಸರ್ಕಾರ
Government of Karnataka

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

ದಸ್ತಾವೇಜು ಹಾಳೆ
Document Sheet
ರೂ. 2/-
ಯೂನಿಟ್-1
ಬೆಂಗಳೂರು

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This sheet can be used for any document

1 ನೇ ಪುಸ್ತಕದ 821 ನೇ ದಸ್ತಾವೇಜಿನ 5/9 ನೇ ಪುಟ

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

ಪಾವತಿಸಿದ ಒಟ್ಟು ಮುದ್ರಾಂಕ ಶುಲ್ಕ ರೂ.
Total stamp duty paid Rs.
2010-11



5. That the LESSEE shall use the schedule property only for the purpose of construction of building for the purpose of **SOCIAL & CULTURAL CENTRE** and shall not use it for any other purposes and no residential or Commercial building shall be constructed on the allotted C.A. Site.

6. That the LESSEE shall not sub-divide or alienate by way of lease or otherwise or create any change or otherwise deal with the schedule property either wholly or in part.

7. That the LESSEE shall obtain licence and start construction of the above mentioned building, as per plan approved and mentioned by the Lessor within six months, and shall complete the same within two years from the date of registration of the C.A. Site lease agreement, failing which the lease will be cancelled. The Licence of the Legal Authority shall be obtained by the lessee after getting the plan approved by B.D.A.

8. That the LESSEE shall not put up any permanent structure on the land other than the above mentioned structure specially mentioned hereunder.

**a) SOCIAL & CULTURAL CENTRE.**

9. That the LESSEE shall not become the owner or derive any title to the property.

9A. That the LESSEE shall be liable to pay the taxes, fees and Cesses payable in respect of the C.A. Site and any building erected thereon from the date of Registration of C.A. Site Lease agreement.

...4/-

For Television Cultural & Sports C.

Secretary

ಉಪಕಾರ್ಯದರ್ಶಿ-1
ಸಿ.ಎ. ನಿವೇಶನ ವಿಭಾಗ
ಬೆಂ.ಅ.ಪ್ರಾ. ಬೆಂಗಳೂರು

RS1 6/19

ಗುರುತಿಸುವವರು.

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಸಹಿ |
|---|---|---|
| 1 | S.V. Shivakumar<br>No. 2617, 37th Cross, 26th Main, 9th Block, Jayanagar, Bangalore-69. | S.V. Shivakumar |
| 2 | Rajesh B.<br>No. 29, 7th Cross, Y.M. Layout, Nagashetty Halli, R.M.V. 2nd Stage, Bangalore-94. | Rajesh B. |

9/7/2010
ಅಧಿಕ ಜಿಲ್ಲಾ ನೋಂದಣಾಧಿಕಾರಿ
Additional District Registrar
ಬೆಂಗಳೂರು ನಗರ ಜಿಲ್ಲೆ

B.D.A. No. BDA/ADM/C.A. No.08/2010-11 Date 09/07/10

1 ನೇ ಪುಸ್ತಕದ ದಸ್ತಾವೇಜು
ನಂಬರ BDA-1-00851-2010-11 ಆಗಿ
ಸಿ.ಡಿ. ನಂಬರ BDAD157 ನೇ ದ್ದರಲ್ಲಿ
ದಿನಾಂಕ 09-07-2010 ರಂದು ನೋಂದಾಯಿಸಲಾಗಿದೆ

(ಎಂ. ಶ್ರೀಹರಿ)
ಅಧಿಕ ಜಿಲ್ಲಾ ನೋಂದಣಾಧಿಕಾರಿ
ಬೆಂಗಳೂರು ನಗರ ಜಿಲ್ಲೆ

Designed and Developed by C-DAC, ACTS, Pune

ಈ ದಸ್ತಾವೇಜು ಹಾಳೆಯನ್ನು ಕರ್ನಾಟಕ ಸರ್ಕಾರದ
ಆದೇಶ ಸಂಖ್ಯೆ ಕಂಇ 152 ಮುನೋಮು 2003
ದಿನಾಂಕ 09-05-2003ರ ಪ್ರಕಾರ ಮುದ್ರಿಸಲಾಗಿದೆ.

ಕರ್ನಾಟಕ ಸರ್ಕಾರ
Government of Karnataka

ದಸ್ತಾವೇಜು ಹಾಳೆ
Document Sheet

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This sheet can be used for any document

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

1 ನೇ ಪುಸ್ತಕದ 8561 ನೇ ಪುಟ
Total stamp duty paid Rs.



10. That the LESSEE agrees that the lease amount fixed is tentative and is subject to enhancement and agrees to pay the enhanced lease amount in case of compensation for the land in which the schedule property is included is enhanced by the Court under the Land Acquisition Act.

11. That the LESSEE agrees to abide by all the conditions and restrictions imposed under BDA Civic Amenity Sites Rules, 1989 as far as they are not inconsistent with the terms of this Agreement.

11A. That the LESSEE shall not violate or infringe any of the terms & conditions mentioned above and if Lessee were to violate any of the terms and conditions, the Lessor is at liberty to resume the schedule property with thirty days notice to the Lessee and to re-enter the property free from all encumbrances and free of all objections from the Lessee or any person claiming through him and the money, if any paid shall also be liable to be forfeited by the Lessor.

12. That in consideration of a sum of **Rs. 94,18,500/- (Rupees Ninety Four Lakhs Eighteen Thousand Five hundred only)** being amenity amount for **30 years** lumpsum lease amount, which has been paid as per the option exercised by the Lessee which the LESSOR hereby acknowledge, the parties to this agreement with free will and consent set their hands and souls on the day above mentioned in this schedule.

For Television Culture & Sports

Secretary

...5/-

ಕರ್ನಾಟಕ ಸರ್ಕಾರ

ನೋಂದಣಿ ಹಾಗೂ ಮುದ್ರಾಂಕ ಇಲಾಖೆ

Department of Stamps and Registration

ಪ್ರಮಾಣ ಪತ್ರ

1957 ರ ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ 10 ಎ ಅಡಿಯಲ್ಲಿಯ ಪ್ರಮಾಣ ಪತ್ರ

ಶ್ರೀ M/S. TELEVISION CULTURAL & SPORTS CLUB (R), represented by its Secretary SRI. RAVIKIRAN S/o Late. K.V. Prasad. , ಇವರು 283150.00 ರೂಪಾಯಿಗಳನ್ನು ನಿಗದಿತ ಮುದ್ರಾಂಕ ಶುಲ್ಕವಾಗಿ ಪಾವತಿಸಿರುವದನ್ನು ದೃಡಿಕರಿಸಲಾಗಿದೆ

| ಪ್ರಕಾರ | ಮೊತ್ತ (ರೂ.) | ಹಣದ ಪಾವತಿಯ ವಿವರ |
|---|---|---|
| ಇತರ ಬ್ಯಾಂಕ್ ಡಿ.ಡಿ. | 283150.00 | DD No. 041373, Date. 09/07/10, State Bank of Mysore, Bangalore-4. |
| ಒಟ್ಟು : | 283150.00 | |

ಸ್ಥಳ : ಬೆಂಗಳೂರು ಅಭಿವೃದ್ಧಿ

ದಿನಾಂಕ : 09/07/2010

[illegible signature and stamp]

Designed and Developed by C- DAC ,ACTS Pune.

ಈ ದಸ್ತಾವೇಜು ಹಾಳೆಯನ್ನು ಕರ್ನಾಟಕ ಸರ್ಕಾರದ
ಆದೇಶ ಸಂಖ್ಯೆ ಕಂಇ 152 ಮುನೋಮು 2003
ದಿನಾಂಕ 09-05-2003ರ ಪ್ರಕಾರ ಮುದ್ರಿಸಲಾಗಿದೆ.

ಕರ್ನಾಟಕ ಸರ್ಕಾರ
Government of Karnataka

ದಸ್ತಾವೇಜು ಹಾಳೆ
Document Sheet

ನೋಂದಣಿ ಹಾಗೂ ಮುದ್ರಾಂಕ ಇಲಾಖೆ ಬೆಲೆ ರೂ. 2/-
Registration and Stamps Department

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This sheet can be used for any document

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

1ನೇ ಪುಸ್ತಕದ 851 ಒಟ್ಟು ಮುದ್ರಾಂಕ ಶುಲ್ಕ ರೂ. Total stamp duty paid Rs. ನೇ ದಸ್ತಾವೇಜಿನ 9 ನೇ ಪು

2010-11



## SCHEDULE

Civic Amenity Site No. 08, BHARATH HBCS, Sy.No. 17 & 18, Uttarahalli, Bangalore, Bounded by:

| | | |
|---|---|---|
| East by | : | Road. |
| West by | : | Road. |
| North by | : | Road. |
| South by | : | Road. |

Measuring East to West:- Bit 1) 30.40 (Thirty Point Four Zero), Bit 2) $\frac{30.40 + 42.00}{2}$ (Thirty Point Four Zero Plus Forty Two / Two) Mtr.,, and North to South :- Bit 1) 37.00 (Thirty Seven), Bit 2) $\frac{86.00 + 60.00}{2}$ (Eighty Six Plus Sixty / Two) Mtr., and in all measurement 3767.40 [Three Thousand Seven Hundred and Sixty Seven Point Four Zero] Sq. Mtrs.,

Witnesses :

1. J.V. [signature]
No. 2617, 37th Cross, 26th Main
9th Block, Jayanagar
B'lore - 69

2. [signature]
SHIVEGOWDA
1078, 9th Main, HSK BSK 3rd Stg.
BL-85

of Television Cultural & Sports
[signature]
Secretary

SIGNATURE OF THE LESSEE

Witnesses :

1. [signature]
9/7/10
N.S. PRASAD
SUPT

2. [signature]
Lokkanagoud
FDA (BDA)

[signature]
ಉಪಕಾರ್ಯದರ್ಶಿ-1
ಪಿ.ಎ. ನಿವೇಶನ ವಿಭಾಗ
ಬೆಂ.ಅ.ಪ್ರಾ. ಬೆಂಗಳೂರು

SIGNATURE OF THE LESSOR

ಅನುಬಂಧ -2

13

ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ, #146, 2ನೇ ಮಹಡಿ, ಸಹಕಾರ ಸೌಧ, 8ನೇ ಕ್ರಾಸ್, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ಸಂಖ್ಯೆ:ಡಿಆರ್‌ಬಿ-3/ಸಂ.ಸಂ/ದೂರು/10/2023-24 ದಿನಾಂಕ:18-1-2024

ಗೆ,

ಹರೀಶ್ ಕುಮಾರ್ ಬಿ.ಎಸ್

ಸಹಕಾರ ಅಭಿವೃದ್ಧಿ ಅಧಿಕಾರಿ

ಆನೇಕಲ್ ತಾಲ್ಲೂಕು.

ವಿಷಯ: ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ಇದರ ಕಾರ್ಯದರ್ಶಿಯ ವಿರುದ್ಧ ದೂರು ಅರ್ಜಿ ಕುರಿತು.

ಉಲ್ಲೇಖ:1. ಶ್ರೀ ವಿಜಯ್‌ಕುಮಾರ್ ಇವರ ದೂರು ಅರ್ಜಿ ದಿನಾಂಕ: 02-01-2024.

2. ಶ್ರೀ ಬಿ.ಎಸ್ ಲಿಂಗದೇವರು, ಇವರ ದೂರು ಅರ್ಜಿ ದಿನಾಂಕ: 08-01-2024

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಈ ಸಂಘದ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಇವರ ವಿರುದ್ಧ ಉಲ್ಲೇಖಿತ ದೂರು ಅರ್ಜಿಗಳಲ್ಲಿ ದೂರು ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಯಲ್ಲಿ ಕಾರ್ಯದರ್ಶಿಯವರು ಹಣದುರುಪಯೋಗ ಮಾಡಿ ಕಾಯ್ದೆ ಕಲಂ ಹಾಗೂ ಸಂಘದ ಉಪ ನಿಯಮಗಳನ್ನು ಪಾಲಿಸದೆ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಿರುತ್ತಿರುವ ಬಗ್ಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ದೂರು ಅರ್ಜಿಯಲ್ಲಿರುವ ಅಂಶಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಸಂಘಕ್ಕೆ ಖುದ್ದು ಭೇಟಿ ನೀಡಿ ದೂರು ಅಂಶಗಳ ವಿಚಾರಣೆ ನಡೆಸಿ ಈ ಕಛೇರಿಗೆ 7 ದಿನಗಳೊಳಗೆ ವರದಿ ಸಲ್ಲಿಸಲು ಸೂಚಿಸಿದೆ.

(ಬಿ.ಕೆ ಸಲೀಂ)

ಸಹಕಾರ ಸಂಘಗಳ ಉಪನಿಬಂಧಕರು

3ನೇ ವಲಯ, ಬೆಂಗಳೂರು ನಗರ ಜಿಲ್ಲೆ

ಪ್ರತಿಯನ್ನು ಮಾಹಿತಿಗಾಗಿ

1. ಶ್ರೀ ರವಿಕಿರಣ್, ಕಾರ್ಯದರ್ಶಿ, ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ನಂ 17, ಭಾರತ್ ಹೆಚ್‌ಬಿಸಿಎಸ್ ಲೇಔಟ್, ಉತ್ತರಹಳ್ಳಿ, ಬೆಂಗಳೂರು -560061, ಇವರಿಗೆ ಕಳುಹಿಸುತ್ತಾ ವಿಚಾರಣಾಧಿಕಾರಿಯವರಿಗೆ ಅಗತ್ಯ ದಾಖಲಾತಿಗಳನ್ನು ಹಾಗೂ ಮಾಹಿತಿಯನ್ನು ಒದಗಿಸಿ ವಿಚಾರಣೆ ನಡೆಸಲು ಸಹಕರಿಸಲು ಸೂಚಿಸಿದೆ.
2. ಶ್ರೀ ಬಿ. ಲಿಂಗದೇವರು ಮತ್ತು ಇತರರು, ನಂ:47, 4ನೇ ಮುಖ್ಯರಸ್ತೆ, ಎಮ್‌ಎಲ್‌ಎ ಬಡಾವಣೆ, ಆರ್‌ಟಿ ನಗರ್ ಬೆಂಗಳೂರು-560032 ಇವರಿಗೆ ಕಳುಹಿಸಿದೆ.

22/01/2024

ಅನುಬಂಧ-3

12



ರವರಿಗೆ, ದಿನಾಂಕ: 29-1-2024

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳೂ ಹಾಗೂ
ಸಹಕಾರ ಸಂಘಗಳ ಉಪನಿಬಂಧಕರು,
3ನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಮಾನ್ಯರೆ,

ವಿಷಯ: ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ಇದರ ಕಾರ್ಯದರ್ಶಿಯ ವಿರುದ್ಧ ದೂರು ಅರ್ಜಿ ಕುರಿತು.

ಉಲ್ಲೇಖ: 1)ಶ್ರೀ ಬಿ.ಎಸ್.ಲಿಂಗದೇವರು ಹಾಗೂ ಇತರರ ದೂರು ಅರ್ಜಿ ದಿನಾಂಕ: 08-1-2024
2)ಶ್ರೀ ವಿಜಯಕುಮಾರ್ ಇವರ ದೂರು ಅರ್ಜಿ ದಿನಾಂಕ: 2-1-2024
3) ಗಣೇಶ್‌ರಾವ್ ಕೇಸರ್ಕರ್, ಇವರ ದೂರು ಅರ್ಜಿ ದಿನಾಂಕ: 19-1-2024
4) ಶ್ರೀ ಭಾಸ್ಕರ್ ಎನ್ಎಸ್ ಇವರ ದೂರು ಅರ್ಜಿ ದಿನಾಂಕ: 18-1-2024
5)ಸಹಕಾರ ಸಂಘಗಳ ಉಪನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ಪತ್ರ ಸಂಖ್ಯೆ: ಡಿಆರ್‌ಬಿ-3/ದೂರು/60/2023-24 ದಿನಾಂಕ: 18-1-2024 ಸ್ವೀಕೃತಿ ದಿನಾಂಕ: 22-1-2024

29/01/24

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಿಂದ (4)ರವರೆಗಿನ ದೂರು ಅರ್ಜಿಗಳನ್ನು ಉಲ್ಲೇಖ(5)ರ ಪತ್ರದಲ್ಲಿ ಲಗತ್ತಿಸಿ ದೂರು ಅರ್ಜಿಯಲ್ಲಿರುವ ಅಂಶಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಸಂಘಕ್ಕೆ ಖುದ್ದು ಭೇಟಿ ನೀಡಿ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ ಸಂಘದ/ಕ್ಲಬ್‌ನ ಕಛೇರಿಗೆ ದಿನಾಂಕ: 22-1-2024ರಂದು ಖುದ್ದು ಭೇಟಿ ನೀಡಲಾಗಿರುತ್ತದೆ.

ಶ್ರೀ ಬಿ.ಎಸ್. ಲಿಂಗದೇವರು ನೀಡಿರುವ ದೂರು ಅರ್ಜಿಯ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್‌ಗೆ ಸರ್ಕಾರದಿಂದ ಜಾಗ ಮಂಜೂರಾಗಿರುತ್ತದೆ. ಕಟ್ಟಡ ಕಟ್ಟಲು ಸುಮಾರು 3 ಕೋಟಿಗಳ ಅನುದಾನ ಬಿಡುಗಡೆ ಆಗಿರುವುದರಿಂದ, ಕಾರ್ಯಕಾರಿ ಸಮಿತಿಯು ಪಾರದರ್ಶಕ ಕಾಯ್ದೆ ರೀತ್ಯಾ ಟೆಂಡರ್ ಕರೆದು ಕಟ್ಟಡ ನಿರ್ಮಾಣ ಮಾಡಿರುವುದಿಲ್ಲವೆಂದು ದೂರಿರುತ್ತಾರೆ.

ಕ್ಲಬ್‌ನ ಆವರಣದಲ್ಲಿ ಶೇಕಡ 50ರಷ್ಟು ಭಾಗವನ್ನು ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಗೆ ಕಛೇರಿ ತೆರೆಯಲು ಅವಕಾಶ ನೀಡದೇ ಇರುವುದು

ದಿನಾಂಕ: 1-12-2018ರ ಚುನಾವಣೆಯಲ್ಲಿ ಸದಸ್ಯರಿಗೆ ಸ್ಪರ್ಧಿಸಲು ಅವಕಾಶ ಕೊಡದೆ, ಚುನಾವಣೆಗೆ ಆಯ್ಕೆ ಆಗಬೇಕಿರುವ ಸಂಖ್ಯೆಗಿಂತ ಕಡಿಮೆ ಅಭ್ಯರ್ಥಿಗಳು ಕಣದಲ್ಲಿ ಇರುವಂತೆ ಸಂದರ್ಭ ಸೃಷ್ಟಿಸಿಕೊಂಡ ರವಿಕಿರಣ್ ರವರು 10 ಜನರ ಅವರದೇ ತಂಡ ಅವಿರೋಧ ಆಯ್ಕೆಯಾಗಿರುವುದಾಗಿ ಆರೋಪಿಸಿರುತ್ತಾರೆ.

ಕ್ಲಬ್‌ನ ಸದಸ್ಯತ್ವವನ್ನು ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಒಬ್ಬರೆ ನಿರ್ಧರಿಸಿ ನೀಡುತ್ತಿರುವುದಾಗಿ ಆರೋಪಿಸಿರುತ್ತಾರೆ.

ಉಲ್ಲೇಖ(2)ರಲ್ಲಿ ಶ್ರೀ ವಿಜಯಕುಮಾರ್ ರವರು ಸಲ್ಲಿಸಿರುವ ದೂರು ಅರ್ಜಿಯಲ್ಲಿ ಸಂಸ್ಥೆಯು ತನ್ನ ವ್ಯವಹಾರಗಳಲ್ಲಿ ಸದಸ್ಯರುಗಳಿಂದ ಪಡೆದಿರುವ ಶುಲ್ಕದ ಜಿಎಸ್‌ಟಿಯನ್ನು ಸರ್ಕಾರಕ್ಕೆ ಪಾವತಿಸಿರುವುದಿಲ್ಲ. ಸದಸ್ಯರುಗಳ ಕಾರ್ಡ್‌ಗಳನ್ನು ಸದಸ್ಯರುಗಳ ಗಮನಕ್ಕೆ ತರದೇ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರದಿಂದ ಅನುದಾನ ಪಡೆದಿರುವ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ಆರೋಪಿಸಿರುತ್ತಾರೆ. ಕ್ಲಬ್‌ನ ಕಾರ್ಡ್ ವಿಭಾಗದಲ್ಲಿ ಶ್ರೀನಿವಾಸ್ ಎಂಬುವವರು ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಶ್ರೀ ವಿಜಯಕುಮಾರ್ ಇವರಿಗೆ ಸುಮಾರು ರೂ.2,80,000/-ವರೆಗೆ ಬಾಕಿ ಉಳಿಸಿಕೊಂಡು ಈವರೆವಿಗೂ ಹಿಂದಿರುಗಿಸಿಲ್ಲವೆಂದು ಆರೋಪಿಸಿರುತ್ತಾರೆ.

ಉಲ್ಲೇಖ(3) ರಲ್ಲಿ ಶ್ರೀ ಗಣೇಶ್‌ರಾವ್ ಕೇಸರ್ಕರ್ ಇವರು ಕ್ಲಬ್‌ನ ಕಟ್ಟಡ ಕಾಮಗಾರಿ ಅವಧಿ 2009 ರಿಂದ 2014ರಲ್ಲಿ ಅಂದಿನ ಅಧ್ಯಕ್ಷರು ಹಾಗೂ ಅಂದಿನ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಇವರುಗಳು ಖಜಾಂಚಿ ಇಲ್ಲದೇ ಚೆಕ್ ವ್ಯವಹಾರ ನಡೆಸಿರುವುದಾಗಿ ಆರೋಪಿಸಿರುತ್ತಾರೆ.

ಉಲ್ಲೇಖ(4)ರಲ್ಲಿ ಶ್ರೀ ಭಾಸ್ಕರ್ ಎಸ್.ಎಸ್. ಇವರು ಕ್ಲಬ್‌ನ ಸದಸ್ಯತ್ವವನ್ನು ಸಂಸ್ಥೆಯ ಬೈಲಾ ಉಲ್ಲಂಘಿಸಿ ನೀಡಿರುವುದಾಗಿ ಆರೋಪಿಸಿರುತ್ತಾರೆ. ಸದಸ್ಯತ್ವ ನೀಡುವಾಗ ಒಬ್ಬೊಬ್ಬ ಸದಸ್ಯರಿಗೆ ಒಂದೊಂದು ಮೊತ್ತ ಪಾವತಿಸಿಕೊಂಡಿರುವುದಾಗಿ ಸದಸ್ಯತ್ವ ನೀಡಿರುವುದಾಗಿ ಆರೋಪಿಸಿರುತ್ತಾರೆ.

ಮೇಲ್ಕಂಡ ಉಲ್ಲೇಖ(1) ರಿಂದ (4)ರವರೆಗಿನ ದೂರು ಅರ್ಜಿಯಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಚುನಾವಣೆ, ಸದಸ್ಯತ್ವ, ಕಟ್ಟಡ ಕಾಮಗಾರಿ, ಬೈಲಾ ಉಲ್ಲಂಘನೆಯು ಪ್ರಮುಖ ವಿಷಯಗಳಾಗಿರುತ್ತವೆ. ದೂರು ಅರ್ಜಿ ವಿಚಾರಣೆ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕಿಟ್ಟಿಎಸ್, ಶ್ರೀ ಸಂಜೀವ್ ತಗಡೂರು, ಶ್ರೀ ಶ್ರೀನಾಥ್ ವಸಿಷ್ಠ, ಶ್ರೀ ಗುರುಪ್ರಸಾದ್ ಎಂ ಹಾಗೂ ಮ್ಯಾನೇಜರ್ ಶ್ರೀ ರಾಜೇಶ್.ಬಿ ಇವರು ಹಾಜರಿರುತ್ತಾರೆ.

ವಿಚಾರಣೆ ಸಮಯದಲ್ಲಿ ಕ್ಲಬ್‌ಗೆ ಸಂಬಂಧಿಸಿದ ಲೆಕ್ಕಪತ್ರಗಳು, ವಾರ್ಷಿಕ ಸರ್ವ ಸದಸ್ಯರ ಸಭೆ ಪುಸ್ತಕ, ಮಾಹಿತಿ/ದಾಖಲಾತಿಗಳು ಹಾಗೂ ಕ್ಲಬ್‌ನ ಕಛೇರಿ ಕೀಗಳು ಸಹ ಕಾರ್ಯದರ್ಶಿ ರವಿಕಿರಣ್ ಇವರ ವಶದಲ್ಲಿರುವುದಾಗಿ ಹಾಜರಿದ್ದ ಎಲ್ಲರೂ ತಿಳಿಸಿರುತ್ತಾರೆ. ವಿಚಾರಣೆ ಸಂದರ್ಭದಲ್ಲಿ ಹಾಜರುಪಡಿಸಿದ ಸಂಸ್ಥೆಯ ಸದಸ್ಯತ್ವದ ಕೆಲವು ದಾಖಲಾತಿಗಳನ್ನು ಪರಿಶೀಲಿಸಲಾಗಿ ಸದರಿ ಸದಸ್ಯತ್ವದ

ಅರ್ಜಿಗಳಲ್ಲಿ ಕಾರ್ಯದರ್ಶಿ ಸಹಿ ಮಾತ್ರ ಇದ್ದು, ಇತರೆ ಕಾರ್ಯಕಾರಿ ಸಮಿತಿ ಸದಸ್ಯರ ಸಹಿ ಇರುವುದಿಲ್ಲ. ಕೆಲವು ಸದಸ್ಯತ್ವ ಅರ್ಜಿಗಳಲ್ಲಿ ಸದಸ್ಯರ ಸಹಿ ಇಲ್ಲದಿರುವುದನ್ನು ಗಮನಿಸಲಾಗಿದೆ. ಸದಸ್ಯತ್ವ ನೀಡಿರುವ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಕಾರ್ಯಕಾರಿ ಸಮಿತಿ ನಿರ್ಣಯ ಪ್ರತಿ ಲಭ್ಯವಿರುವುದಿಲ್ಲ. ಆದುದರಿಂದ ಈ ಆರೋಪವು ಗಂಭೀರವಾಗಿರುವದರಿಂದ ಹೆಚ್ಚಿನ ತನಿಖೆ ಅಗತ್ಯವಿರುತ್ತದೆ.

ಕ್ಲಬ್‌ನ ಕಾರ್ಯಕಾರಿ ಸಮಿತಿ ಚುನಾವಣೆಯು ದಿನಾಂಕ: 1-12-2018 ರಂದು ಐದು ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ಸದರಿ ಸಮಿತಿ ಅವಧಿಯು 1-12-2023ಕ್ಕೆ ಪೂರ್ಣಗೊಂಡಿರುತ್ತದೆ. ತದನಂತರ ಚುನಾವಣೆ ನಡೆಸಿರುವುದಿಲ್ಲವೆಂದು ಹಾಜರಿದ್ದವರು ತಿಳಿಸಿರುತ್ತಾರೆ. ಕಾಲ ಕಾಲಕ್ಕೆ ಸರ್ವಸದಸ್ಯರ ಸಭೆಯನ್ನು ಬೈಲಾ ರೀತ್ಯಾ ನಡೆಸಿರುವುದಿಲ್ಲವೆಂದು ಹಾಜರಿದ್ದ ಸಮಿತಿ ಸದಸ್ಯರು ಆರೋಪಿಸಿರುತ್ತಾರೆ.

ಕ್ಲಬ್‌ನ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಪಾರದರ್ಶಕ ಕಾಯ್ದೆಯಡಿ ಟೆಂಡರ್ ಕರೆಯದೆ ಕಟ್ಟಡ ಕಾಮಗಾರಿ ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಆರೋಪದ ಬಗ್ಗೆ ಪರಿಶೀಲಿಸಲು ಮಾಹಿತಿ/ದಾಖಲಾತಿಗಳು ಲಭ್ಯವಿರುವುದಿಲ್ಲ. ಈ ಎಲ್ಲಾ ದಾಖಲೆಗಳು ಶ್ರೀ ರವಿಕಿರಣ್ ಇವರ ವಶದಲ್ಲಿರುವುದಾಗಿ ತಿಳಿಸಿರುತ್ತಾರೆ. ಈ ಆರೋಪವು ಸಹ ಗಂಭೀರ ಸ್ವರೂಪದ್ದಾಗಿರುವುದರಿಂದ ಹೆಚ್ಚಿನ ತನಿಖೆ ಅಗತ್ಯವಿರುತ್ತದೆ.

ಮುಂದುವರೆದು ಕಾರ್ಯಕಾರಿ ಸಮಿತಿ ತೀರ್ಮಾನ ದಿನಾಂಕ: 21-1-2024 ರಂದು ಶ್ರೀ ರವಿಕಿರಣ್, ಕಾರ್ಯದರ್ಶಿ., ಎ.ಎನ್.ಉಮಾಕಾಂತ್ ಹಾಗೂ ಶಶಿ ಕುಮಾರ್ ಇವರುಗಳ ಮೇಲೆ ಆಪಾದನೆಗಳು ಬಂದಿದ್ದರ ಹಿನ್ನಲೆಯಲ್ಲಿ ಅವರುಗಳಿಗೆ ಕಾರಣ ಕೇಳಿ ನೋಟೀಸ್ ಸಮಜಾಯಿಷಿ ಕೇಳಿದ್ದು, ಸೂಕ್ತ ವಿವರಣೆ ನೀಡದ ಹಿನ್ನೆಲೆಯಲ್ಲಿ ಸದರಿಯವರುಗಳ ಮೇಲೆ ಸೂಕ್ತ ವಿಚಾರಣೆ ನಡೆಸಲು ಸರ್ವಾನುಮತದಿಂದ ತೀರ್ಮಾನಿಸಿರುವುದಾಗಿ ನಿರ್ಣಯ ಕೈಗೊಂಡಿರುತ್ತಾರೆ. ವಿಚಾರಣೆ ಮುಗಿಯುವವರೆಗೆ ಶ್ರೀ ರವಿಕಿರಣ್, ಎ.ಎನ್.ಉಮಾಕಾಂತ್ ಹಾಗೂ ಶಶಿಕುಮಾರ್ ಇವರುಗಳ ಸದಸ್ಯತ್ವವನ್ನು ಅಮಾನತ್ತು ಮಾಡಿರುವುದಾಗಿ ದಿನಾಂಕ: 22-1-2024ರ ಪತ್ರದಲ್ಲಿ ತಿಳಿಸಿರುತ್ತಾರೆ. ಹಾಗೂ ಕ್ಲಬ್‌ಗೆ ಸಂಬಂಧಿಸಿದ ಕಛೇರಿ ಕೀಲಿ ಕೈ ಹಾಗೂ ದಾಖಲೆಗಳನ್ನು ಕಾರ್ಯಕಾರಿ ಸಮಿತಿಗೆ ಒಪ್ಪಿಸುವಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಕ್ಲಬ್‌ನ ಕಟ್ಟಡದ ಪ್ರಾರಂಭದಿಂದ ಇಂದಿನವರೆಗೂ ನಡೆದಿರುವ ಅಕ್ರಮ ವ್ಯವಹಾರ ಮತ್ತು ಕಾನೂನು ಬಾಹಿರ ಹಣಕಾಸಿನ ವ್ಯವಹಾರ ಈ ಎಲ್ಲಾ ಚಟುವಟಿಕೆಗಳ ಮೇಲೆ ಸಂಪೂರ್ಣ ವಿಚಾರಣೆ ನಡೆಸಲು ತೀರ್ಮಾನಿಸಲಾಗಿರುತ್ತದೆ.

ದೂರು ಅರ್ಜಿಯಲ್ಲಿ ಪ್ರಮುಖವಾಗಿ ಕಾರ್ಯಕಾರಿ ಸಮಿತಿ ಚುನಾವಣೆ, ಸದಸ್ಯತ್ವ, ಕಟ್ಟಡ ಕಾಮಗಾರಿ, ಬೈಲಾ ಉಲ್ಲಂಘನೆಯು ಪ್ರಮುಖ ವಿಷಯಗಳಾಗಿರುತ್ತವೆ. ಈ ಅಂಶಗಳ ಬಗ್ಗೆ ಕಾರ್ಯಕಾರಿ

ಸಮಿತಿ ಸಭೆಯಲ್ಲಿ ವಿಚಾರಣೆ ನಡೆಸಲು ತೀರ್ಮಾನಿಸಿರುವುದರಿಂದ ಸರ್ಕಾರದಿಂದ ಅನುದಾನ ಪಡೆದಿರುವುದರಿಂದ ಮೇಲ್ಕಂಡ ವಿಷಯಗಳ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 25ರಡಿ ಶಾಸನಬದ್ಧ ವಿಚಾರಣೆ ನಡೆಸುವುದು ಸೂಕ್ತ ವೆಂದು ಅಭಿಪ್ರಾಯಪಟ್ಟಿದೆ.

ಮುಂದುವರೆದು ಕಾರ್ಯಕಾರಿ ಸಮಿತಿ ಚುನಾವಣೆಯನ್ನು ನಡೆಸದೇ ಇರುವುದರಿಂದ ದಿನಾಂಕ: 1-12-2023ಕ್ಕೆ ಸಮಿತಿ ಅವಧಿಯು ಅಂತ್ಯಗೊಂಡಿರುವುದರಿಂದ ಕಾರ್ಯಕಾರಿ ಸಮಿತಿ ಸ್ಥಾನದಲ್ಲಿ ಆಡಳಿತಾಧಿಕಾರಿ ನೇಮಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಮೇಲ್ಕಂಡ ವಾಸ್ತವ ಅಂಶಗಳನ್ನು ತಮ್ಮ ಅವಗಾಹನೆಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

29/1/24.

(ಬಿ.ಎಸ್.ಹರೀಶ್ ಕುಮಾರ್)
ಸಹಕಾರ ಅಭಿವೃದ್ಧಿ ಅಧಿಕಾರಿ,
ಆನೇಕಲ್ ತಾಲ್ಲೂಕು.

ಅನುಬಂಧ - 4

8

Office of The Deputy Registrar of
Co-Operative Society
3rd Zone, No.146 Sahakara Soudha
8th Cross, 3rd Main, Margosa Road
Bangalore - 560 003

ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ, #146, 2ನೇ ಮಹಡಿ, ಸಹಕಾರ ಸೌಧ, 8ನೇ ಕ್ರಾಸ್, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ಸಂಖ್ಯೆ:ಡಿಆರ್‌ಬಿ-3/ಸ್ಥ.ಸಂ/ದೂರು/66/2023-24 ದಿನಾಂಕ:05-02-2024

ವಿಷಯ: ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ಇದರ ಕಾರ್ಯದರ್ಶಿಯ ವಿರುದ್ಧ ದೂರು ಅರ್ಜಿ ಕುರಿತು.

ಉಲ್ಲೇಖ:1. ಶ್ರೀ ವಿಜಯ್‌ಕುಮಾರ್ ಇವರ ದೂರು ಅರ್ಜಿ ದಿನಾಂಕ: 02-01-2024.

2. ಶ್ರೀ ಬಿ.ಎಸ್ ಲಿಂಗದೇವರು, ಇವರ ದೂರು ಅರ್ಜಿ ದಿನಾಂಕ: 08-01-2024

3. ಗಣೇಶ್‌ರಾವ್ ಕೇಸರ್ಕರ್, ಇವರ ದೂರು ಅರ್ಜಿ ದಿನಾಂಕ: 19-1-2024

4. ಶ್ರೀ ಭಾಸ್ಕರ್ ಎಸ್‌ಎಸ್ ಇವರ ದೂರು ಅರ್ಜಿ ದಿನಾಂಕ:18-1-2024

5. ಈ ಕಛೇರಿ ಸಮಸಂಖ್ಯೆ ಪತ್ರ ದಿನಂಕ: 18-01-2024

6. ಶ್ರೀ ಹರೀಶ್ ಕುಮಾರ್ ಬಿ.ಸ್, ಇವರ ವರದಿ ದಿನಾಂಕ: 29-01-2024

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಈ ಸಂಘದ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಇವರ ವಿರುದ್ಧ ಉಲ್ಲೇಖ(1)ರಿಂದ (4)ರವರೆಗಿನ ದೂರು ಅರ್ಜಿಗಳಲ್ಲಿ ದೂರು ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಯಲ್ಲಿ ಕಾರ್ಯದರ್ಶಿಯವರು ದುರುಪಯೋಗ ಮಾಡಿ ಕಾಯ್ದೆ ಕಲಂ ಹಾಗೂ ಸಂಘದ ಉಪ ನಿಯಮಗಳನ್ನು ಪಾಲಿಸದೆ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಿರುತ್ತಿರುವ ಬಗ್ಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಗಳಲ್ಲಿರುವ ದೂರು ಅಂಶಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಸಂಘಕ್ಕೆ ಖುದ್ದು ಭೇಟಿ ನೀಡಿ ದೂರು ಅಂಶಗಳ ವಿಚಾರಣೆ ನಡೆಸಿ ಈ ಕಛೇರಿಗೆ 7 ದಿನಗಳೊಳಗೆ ವರದಿ ಸಲ್ಲಿಸಲು ಉಲ್ಲೇಖ(5)ರಲ್ಲಿ ಸೂಚಿಸಲಾಗಿತ್ತು. ಅದರಂತೆ ಉಲ್ಲೇಖ(6)ರಲ್ಲಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಇದರ ವಿರುದ್ಧ ಸಲ್ಲಿಸಿರುವ ದೂರು ಅರ್ಜಿಯಲ್ಲಿ ಕಾರ್ಯಕಾರಿ ಸಮಿತಿ ಚುನಾವಣೆ, ಸದಸ್ಯತ್ವ, ಕಟ್ಟಡ ಕಾಮಗಾರಿ, ಬೈಲಾ ಉಲ್ಲಂಘನೆಯು ಪ್ರಮುಖ ವಿಷಯಗಳಾಗಿರುತ್ತವೆ. ಈ ಅಂಶಗಳ ಬಗ್ಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿಚಾರಣೆ ನಡೆಸಲು ತೀರ್ಮಾನಿಸಿರುವುದರಿಂದ ಸರ್ಕಾರದಿಂದ ಅನುದಾನ ಪಡೆದಿರುವುದರಿಂದ ಮೇಲ್ಕಂಡ ವಿಷಯಗಳ

ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 25ರಡಿ ಶಾಸನಬದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವ ಹಿನ್ನಲೆಯಲ್ಲಿ ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ಇದರ ವಿರುದ್ಧ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಆದೇಶ

ಕರ್ನಾಟಕ ಸಂಘಗಳ ಅಧಿನಿಯಮ 1960ರ ಕಲಂ 25ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ , ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ನಂ 17, ಭಾರತ್ ಹೆಚ್‌ಬಿಸಿಎಸ್ ಲೇಔಟ್, ಉತ್ತರಹಳ್ಳಿ, ಬೆಂಗಳೂರು –560061, ಈ ಸಂಘದ ವಿರುದ್ಧ ಸಲ್ಲಿಸಿರುವ ದೂರು ಅರ್ಜಿಗಳ ವಿಚಾರಣೆ ನಡೆಸಲು ಶ್ರೀ ಹರೀಶ್ ಕುಮಾರ್ ಬಿ.ಎಸ್. ಸಹಕಾರ ಅಭಿವೃದ್ಧಿ ಅಧಿಕಾರಿ ಆನೇಕಲ್, ಬೆಂಗಳೂರು ನಗರ ಜಿಲ್ಲೆ. ಇವರನ್ನು ಈ ಕೆಳಕಂಡ ವಿಚಾರಣಾಂಶಗಳಿಗೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ. ವಿಚಾರಣಾಧಿಕಾರಿಗಳು 60 ದಿನಗಳ ಒಳಗಾಗಿ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ.

ವಿಚಾರಣಾಂಶಗಳು:

1. ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್‌ಗೆ ಸರ್ಕಾರದಿಂದ ಜಾಗ ಮಂಜೂರಾಗಿರುತ್ತದೆ. ಕಟ್ಟಡ ಕಟ್ಟಲು ಸುಮಾರು 3 ಕೋಟಿಗಳ ಅನುದಾನ ಬಿಡುಗಡೆ ಆಗಿರುವುದರಿಂದ, ಕಾರ್ಯಕಾರಿ ಸಮಿತಿಯು ಪಾರದರ್ಶಕ ಕಾಯ್ದೆ ರೀತ್ಯಾ ಟೆಂಡರ್ ಕರೆದು ಕಟ್ಟಡ ನಿರ್ಮಾಣ ಮಾಡಿರುವುದಿಲ್ಲವೆಂದು ಆರೋಪಿಸಿರುವ ಬಗ್ಗೆ.
2. ಕ್ಲಬ್‌ನ ಆವರಣದಲ್ಲಿ ಶೇಕಡ 50ರಷ್ಟು ಭಾಗವನ್ನು ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಗೆ ಕಛೇರಿ ತೆರೆಯಲು ಅವಕಾಶ ನೀಡದೇ ಇರುವುದು
3. ದಿನಾಂಕ: 3-12-2018ರ ಚುನಾವಣೆಯಲ್ಲಿ ಸದಸ್ಯರಿಗೆ ಸ್ಪರ್ಧಿಸಲು ಅವಕಾಶ ಕೊಡದೆ, ಚುನಾವಣೆಗೆ ಆಯ್ಕೆ ಆಗಬೇಕಿರುವ ಸಂಖ್ಯೆಗಿಂತ ಕಡಿಮೆ ಅಭ್ಯರ್ಥಿಗಳು ಕಣದಲ್ಲಿ ಇರುವಂತೆ ಸಂದರ್ಭ ಸೃಷ್ಟಿಸಿಕೊಂಡ ರವಿಕಿರಣ್ ರವರು 10 ಜನರ ಅವರದೇ ತಂಡ ಅವಿರೋಧ ಆಯ್ಕೆಯಾಗಿರುವುದಾಗಿ ಆರೋಪಿಸಿರುತ್ತಾರೆ.
4. ಕ್ಲಬ್‌ನ ಸದಸ್ಯತ್ವವನ್ನು ಸಂಸ್ಥೆಯ ಬೈಲಾ ಉಲ್ಲಂಘಿಸಿ ನೀಡಿದ್ದು, ಸದಸ್ಯತ್ವವನ್ನು ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಒಬ್ಬರೆ ನಿರ್ಧರಿಸಿ ಸದಸ್ಯತ್ವ ನೀಡುವಾಗ ಒಬ್ಬೊಬ್ಬ ಸದಸ್ಯರಿಗೆ ಒಂದೊಂದು ಮೊತ್ತ ಪಾವತಿಸಿಕೊಂಡು ಸದಸ್ಯತ್ವ ನೀಡಿರುವುದಾಗಿ ಆರೋಪಿಸಿರುವ ಬಗ್ಗೆ.
5. ಸಂಸ್ಥೆಯು ತನ್ನ ವ್ಯವಹಾರಗಳಲ್ಲಿ ಸದಸ್ಯರುಗಳಿಂದ ಪಡೆದಿರುವ ಶುಲ್ಕದ ಜಿಎಸ್‌ಟಿಯನ್ನು ಸರ್ಕಾರಕ್ಕೆ ಪಾವತಿಸಿರುವುದಿಲ್ಲ. ಸದಸ್ಯರುಗಳ ಕಾರ್ಡ್‌ಗಳನ್ನು ಸದಸ್ಯರುಗಳ ಗಮನಕ್ಕೆ ತರದೇ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿರುವ ಬಗ್ಗೆ.

6. ಸರ್ಕಾರದಿಂದ ಅನುದಾನ ಪಡೆದಿರುವ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ಆರೋಪಿಸಿರುವ ಬಗ್ಗೆ.
7. ಕ್ಲಬ್‌ನ ಕಾರ್ಡ್ ವಿಭಾಗದಲ್ಲಿ ಶ್ರೀನಿವಾಸ್ ಎಂಬುವವರು ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಶ್ರೀ ವಿಜಯಕುಮಾರ್ ಇವರಿಗೆ ಸುಮಾರು ರೂ.2,80,000/-ವರೆಗೆ ಬಾಕಿ ಉಳಿಸಿಕೊಂಡು ಈವರೆವಿಗೂ ಹಿಂದಿರುಗಿಸಿಲ್ಲವೆಂದು ಆರೋಪಿಸಿರುವ ಬಗ್ಗೆ.
8. ಕ್ಲಬ್‌ನ ಕಟ್ಟಡ ಕಾಮಗಾರಿ ಅವಧಿ 2009 ರಿಂದ 2014ರಲ್ಲಿ ಅಂದಿನ ಅಧ್ಯಕ್ಷರು ಹಾಗೂ ಅಂದಿನ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಇವರುಗಳು ಖಜಾಂಚಿ ಇಲ್ಲದೇ ಚೆಕ್ ವ್ಯವಹಾರ ನಡೆಸಿ ಹಣದುರುಪಯೋಗ ಮಾಡಲಾಗಿದೆ ಎಂದು ಆರೋಪಿಸಿರುವ ಬಗ್ಗೆ.
9. ವಿಚಾರಣಾ ಸಮಯದಲ್ಲಿ ಕಂಡುಬರುವ ಇತರೆ ನ್ಯೂನ್ಯತೆಗಳು.

ಮೇಲೆ ನಿಗಧಿಪಡಿಸಿರುವ ವಿಚಾರಣಾಂಶಗಳಿಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸ್ವಸಹಿ ಹಾಗೂ ಕಛೇರಿ ಮೊಹರನೊಂದಿಗೆ ದಿನಾಂಕ:05-02-2024 ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು
3ನೇ ವಲಯ, ಬೆಂಗಳೂರು ನಗರ ಜಿಲ್ಲೆ

ಗೆ,
ಶ್ರೀ ಹರೀಶ್ ಕುಮಾರ್ ಬಿ.ಎಸ್
ಸಹಕಾರ ಅಭಿವೃದ್ಧಿ ಅಧಿಕಾರಿ
ಆನೇಕಲ್ ತಾಲ್ಲೂಕು.

ಅನುಬಂಧ-5

5

**ಕರ್ನಾಟಕ ಸರ್ಕಾರ**
**ಸಹಕಾರ ಇಲಾಖೆ**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1. ಆಲಿ ಅಸ್ಕರ್ ರಸ್ತೆ, ಬೆಂಗಳೂರು-52**

ಸಂ:ಜಂ.ನಿ/(ಐಸಿಡಿಪಿ)/ಸಂ.ಸಂ02/171/2023-24 ದಿನಾಂಕ: 16-02-2024

ರವರಿಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಹಕಾರ ಇಲಾಖೆ,ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

ಮಾನ್ಯರೇ,

ವಿಷಯ :- ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಈ ಸಂಸ್ಥೆಗೆ ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27 ಎ ರನ್ವಯ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಕುರಿತು.

ಉಲ್ಲೇಖ :- ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, 3 ನೇ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಆರ್‌ಬಿ-3/ಸಂಸಂ/ದೂರು/60/2023-24 ದಿನಾಂಕ: 05-02-2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ನಂ.17. ಭಾರತ್ ಹೆಚ್‌ಬಿಸಿಎಸ್ ಲೇಔಟ್, ಉತ್ತರಹಳ್ಳಿ, ಬೆಂಗಳೂರು-61 ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಕೋರಿ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, 3 ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಉಲ್ಲೇಖಿತ ಪ್ರಸ್ತಾವೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದರಿಯವರ ಪ್ರಸ್ತಾವೆಯನ್ನು ಪರಿಶೀಲಿಸಲಾಗಿ, ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ನಂ.17. ಭಾರತ್ ಹೆಚ್‌ಬಿಸಿಎಸ್ ಲೇಔಟ್, ಉತ್ತರಹಳ್ಳಿ, ಬೆಂಗಳೂರು-61 ಈ ಸಂಸ್ಥೆಯು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿಯಾಗಿರುತ್ತದೆ. ಸದರಿ ಸಂಸ್ಥೆಯ ವಿರುದ್ಧ ದೂರು ಅರ್ಜಿಗಳು ಸ್ವೀಕೃತಗೊಂಡಿರುವುದಾಗಿ ತಿಳಿಸಿ, ಸದರಿ ದೂರು ಅರ್ಜಿಗಳಲ್ಲಿ ಸಂಸ್ಥೆಯ ಕಾರ್ಯದರ್ಶಿಯವರು ಹಣ ದುರುಪಯೋಗ ಮಾಡಿ ಕಾಯ್ದೆ ಕಲಂ ಹಾಗೂ ಸಂಘದ ಉಪ ನಿಯಮಗಳನ್ನು ಪಾಲಿಸದೆ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿರುವುದಾಗಿ ದೂರನ್ನು ಸಲ್ಲಿಸಿರುವುದರಿಂದ, ಶ್ರೀ ಹರೀಶ್‌ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ ಇವರಿಗೆ ದೂರು ಅರ್ಜಿಗಳಲ್ಲಿನ ಅಂಶಗಳ ಸತ್ಯಾಸತ್ಯಾತೆಯನ್ನು ಪರಿಶೀಲಿಸಲು ಸೂಚಿಸಿದ್ದು, ಸದರಿಯವರ ವರದಿಯಲ್ಲಿ ಕರ್ನಾಟಕ ಟೆಲಿವಿಷನ್ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್‌ಗೆ ಸರ್ಕಾರದಿಂದ ಜಮೀನು ಮಂಜೂರಾಗಿರುವುದಾಗಿ, ಕಟ್ಟಡ ಕಟ್ಟಲು ಸುಮಾರು ರೂ.3.00 ಕೋಟಿಗಳ ಅನುದಾನ ಬಿಡುಗಡೆಯಾಗಿರುವುದರಿಂದ ಕಾರ್ಯಕಾರಿ ಸಮಿತಿಯು ಪಾರದರ್ಶಕ ಕಾಯ್ದೆ ರೀತ್ಯಾ ಟೆಂಡರ್ ಕರೆದು ಕಟ್ಟಡ ನಿರ್ಮಾಣ ಮಾಡಿರುವುದಿಲ್ಲವೆಂದು ಹಾಗೂ ದಿನಾಂಕ:03-12-2018 ರ ಚುನಾವಣೆಯಲ್ಲಿ

ಸಂಸ್ಥೆಯ ಸದಸ್ಯರಿಗೆ ಸ್ಪರ್ಧಿಸಲು ಅವಕಾಶ ನೀಡದೆ, ಚುನಾವಣೆಗೆ ಆಯ್ಕೆಯಾಗಬೇಕಾಗಿರುವ ಸಂಖ್ಯೆಗಿಂತ ಕಡಿಮೆ ಅಭ್ಯರ್ಥಿಗಳು ಕಣದಲ್ಲಿರುವಂತೆ ಸಂದರ್ಭ ಸೃಷ್ಟಿಸಿಕೊಂಡ ಶ್ರೀ ರವಿಕಿರಣ್ ರವರು 10 ಸದಸ್ಯರ ತಂಡವನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಕ್ಲಬ್‌ನ ಸದಸ್ಯತ್ವವನ್ನು ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ ರವಿಕಿರಣ್ ಒಬ್ಬರೇ ನಿರ್ಧರಿಸಿ ನೀಡುತ್ತಿರುವುದಾಗಿ ತಿಳಿಸಿದ್ದು, ಸಂಸ್ಥೆಯು ತನ್ನ ವ್ಯವಹಾರಗಳಲ್ಲಿ ಸದಸ್ಯರುಗಳಿಂದ ಪಡೆದಿರುವ ಶುಲ್ಕದ ಜಿ.ಎಸ್.ಟಿ.ಯನ್ನು ಸರ್ಕಾರಕ್ಕೆ ಪಾವತಿಸದೆ ಇರುವುದು ಕಂಡುಬಂದಿರುವುದಾಗಿ ಹಾಗೂ ಸದಸ್ಯರ ಕಾರ್ಡುಗಳನ್ನು ಅವರ ಗಮನಕ್ಕೆ ತರದೆ ದುರ್ಬಳಕೆ ಮಾಡಿಕೊಂಡು ಸರ್ಕಾರದಿಂದ ಅನುದಾನ ಪಡೆದಿರುವ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆಂದು ಮತ್ತು ಸಂಸ್ಥೆಯ ಕಾರ್ಯದರ್ಶಿಯವರು ಖಜಾಂಚಿಯವರ ಗಮನಕ್ಕೆ ತರದೆ ಚೆಕ್ ವ್ಯವಹಾರವನ್ನು ಸಹ ನಡೆಸಿರುವುದಾಗಿ ತಿಳಿಸಿರುತ್ತಾರೆಂದು ವರದಿಸಿರುತ್ತಾರೆ. ವಿಚಾರಣೆ ಸಂದರ್ಭದಲ್ಲಿ ಕ್ಲಬ್‌ಗೆ ಸಂಬಂಧಿಸಿದ ಲೆಕ್ಕಪತ್ರಗಳು, ವಾರ್ಷಿಕ ಸರ್ವ ಸದಸ್ಯರ ಸಭೆಪುಸ್ತಕ, ಮಾಹಿತಿ/ದಾಖಲಾತಿಗಳು ಹಾಗೂ ಕ್ಲಬ್‌ನ ಕಛೇರಿ ಕೀಗಳು ಸಹ ಕಾರ್ಯದರ್ಶಿ ರವಿಕಿರಣ್ ಇವರ ವಶದಲ್ಲಿರುವುದಾಗಿ ಸಂಸ್ಥೆಯ ಸದಸ್ಯರು ತಿಳಿಸಿದ್ದು, ಸದಸ್ಯತ್ವದ ಅರ್ಜಿಗಳಲ್ಲಿ ಕಾರ್ಯದರ್ಶಿಯವರ ಸಹಿ ಮಾತ್ರ ಇದ್ದು, ಇತರೆ ಕಾರ್ಯಕಾರಿ ಸಮಿತಿ ಸದಸ್ಯರ ಸಹಿ ಇರುವುದಿಲ್ಲವೆಂದು ಹಾಗೂ ಸದಸ್ಯತ್ವ ನೀಡಿರುವ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಕಾರ್ಯಕಾರಿ ಸಮಿತಿ ನಿರ್ಣಯ ಪ್ರತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಆರೋಪವು ಗಂಭೀರವಾಗಿರುವುದರಿಂದ ಈ ಬಗ್ಗೆ ಹೆಚ್ಚಿನ ತನಿಖೆ ಅವಶ್ಯಕತೆ ಇರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆ.

ದೂರು ಅರ್ಜಿಯಲ್ಲಿ ಪ್ರಮುಖವಾಗಿ ಕಾರ್ಯಕಾರಿ ಸಮಿತಿ ಚುನಾವಣೆ, ಸದಸ್ಯತ್ವ, ಕಟ್ಟಡ ಕಾಮಗಾರಿ, ಬೈಲಾ ಉಲ್ಲಂಘನೆಯು ಪ್ರಮುಖ ಅಂಶಗಳಾಗಿರುವುದರಿಂದ, ಹಾಗೂ ದಿನಾಂಕ:01-12-2023 ಕ್ಕೆ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಅವಧಿಯು ಅಂತ್ಯಗೊಂಡಿದ್ದು, ನಂತರದಲ್ಲಿ ಕಾರ್ಯಕಾರಿ ಸಮಿತಿ ಚುನಾವಣೆಯನ್ನು ನಡೆಸದೆ ಇರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಪ್ರಕರಣ 27(ಎ) ರ ಪ್ರಕಾರ ಸಂಘದ ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಸಂಸ್ಥೆಯ ಚುನಾವಣೆಯನ್ನು ನಡೆಸಲು ಶ್ರೀ ಹಮೀದುಲ್ಲಾಖಾನ್, ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, 3ನೇ ವಲಯ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಬಹುದಾಗಿದೆ ಎಂದು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು, 3ನೇ ವಲಯ, ಬೆಂಗಳೂರು ಇವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, 3 ನೇ ವಲಯ, ಬೆಂಗಳೂರು ನಗರ ಜಿಲ್ಲೆ ರವರ ಶಿಫಾರಸ್ಸನ್ನು

ಪರಿಗಣಿಸಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27 (ಎ) ರೀತ್ಯಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬಹುದಾಗಿರುತ್ತದೆ. ಆಡಳಿತಾಧಿಕಾರಿಯನ್ನು ನೇಮಿಸುವ ಅಧಿಕಾರ ಸರ್ಕಾರಕ್ಕೆ ದತ್ತವಾಗಿರುವುದರಿಂದ ಕರ್ನಾಟಕ ಟೆಲಿವಿಷನ್ ಅಂಡ್ ಸ್ಪೋರ್ಟ್ಸ್ ಕ್ಲಬ್, ನಂ.17. ಭಾರತ್ ಹೆಚ್‌ಬಿಸಿಎಸ್ ಲೇಔಟ್, ಉತ್ತರಹಳ್ಳಿ, ಬೆಂಗಳೂರು-61ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸಲು ಸೂಕ್ತ ಕ್ರಮ ಕೋರಿ ಪ್ರಸ್ತಾವೆಯನ್ನು ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ಭಾ.ಆ.ಸೇ.,
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.